## ಮಾರಣಾಂತಿಕವಲ್ಲ...

ಕೊರೊನಾ ಸೋಂಕು ಮಾರಣಾಂತಿಕವಲ್ಲ. ಸೋಂಕು ತಗುಲಿದ ವ್ಯಕ್ತಿಗಳೆಲ್ಲರೂ ಸಾವಿಗೀಡಾಗುವುದಿಲ್ಲ. ಇತ್ತೀಚಿನ ಚೀನಾ ದೇಶದ ವರದಿಯೇ ಹೇಳುವಂತೆ ಕೊರೊನಾ ಸೋಂಕಿನಿಂದಾದ ಮರಣ ಪ್ರಮಾಣವು ಶೇಕಡಾ ಮೂರರಷ್ಟಿದೆ. ಸೋಂಕು ತಗುಲಿದ ವ್ಯಕ್ತಿಯ ರೋಗ ನಿರೋಧಕ ಶಕ್ತಿಯು ವೈರಾಣುವನ್ನು ಹೊರಹಾಕುವಲ್ಲಿ ಮಹತ್ತರವಾದ ಪಾತ್ರವನ್ನು ಬೀರುತ್ತದೆ.

ವ್ಯಕ್ತಿ ಹಿರಿಯ ವಯಸ್ಸಿನವರಾಗಿದ್ದರೆ, ಮಧುಮೇಹದಿಂದ ಬಳಲುತ್ತಿದ್ದರೆ, ಗರ್ಭಿಣಿಯಾಗಿದ್ದರೆ, ಸ್ಟಿರಾಯ್ಡ್ ಮತ್ತಿತರ ರೋಗ ನಿರೋಧಕ ವ್ಯವಸ್ಥೆಯನ್ನು ದುರ್ಬಲಪಡಿಸುವ ಔಷಧವನ್ನು ಬಳಸುತ್ತಿದ್ದರೆ ಸೋಂಕು ತೀವ್ರವಾಗುವ ಸಂಭವ ಹೆಚ್ಚು. ಈ ಸೋಂಕಿಗೆ ಲಸಿಕೆಯೂ ಇಲ್ಲ. ಹಾಗಾಗಿ ಮುನ್ನೆಚ್ಚರಿಕೆಯೇ ಮದ್ದು.



### ಏನಿದು ಕೊರೊನಾ ವೈರಸ್?

ಕೊರೊನಾ ಎಂಬುದು ವೈರಾಣುಗಳ ಒಂದು ದೊಡ್ಡ ಗುಂಪು. ಕೊರೊನಾ ಎಂಬುದು ಲ್ಯಾಟಿನ್ ಭಾಷೆಯಲ್ಲಿ ಕಿರೀಟ ಎಂಬ ಅರ್ಥವನ್ನು ಹೊಂದಿರುವ ಪದ. ಆಕೃತಿಯಲ್ಲಿ ಕಿರೀಟವನ್ನು ಹೋಲುವುದರಿಂದ ಈ ವೈರಾಣುವಿಗೆ ಈ ಹೆಸರು. ಆರ್ ಎನ್ ಎ ಜಾತಿಗೆ ಸೇರುವ ಈ ವೈರಾಣುಗಳಲ್ಲಿ ಮುಖ್ಯವಾಗಿ ಏಳು ಬಗೆಗಳಿವೆ. ಕೆಲವು ಮನುಷ್ಯರನ್ನೂ ಇನ್ನು ಕೆಲವು ಪ್ರಾಣಿಗಳನ್ನೂ ಬಾಧಿಸುತ್ತವೆ. ಮನುಷ್ಯರಲ್ಲಿ ಈ ವೈರಾಣು ಸಾಮಾನ್ಯವಾಗಿ ಸೌಮ್ಯ ಸ್ವರೂಪದ ನೆಗಡಿ ಮತ್ತು ಶೀತಕ್ಕೆ ಕಾರಣವಾಗುತ್ತದೆ. ಪ್ರಾಣಿಗಳಲ್ಲಿ ಈ ವೈರಾಣು ಮುಖ್ಯವಾಗಿ ಬಾವಲಿ, ಒಂಟೆ, ಹಸು ಹಾಗೂ ಇತರ ಪಕ್ಷಿಗಳಲ್ಲಿ ಪ್ರಾಥಮಿಕವಾಗಿ ಶ್ವಾಸಕೋಶದ ಸೋಂಕನ್ನು ಉಂಟು ಮಾಡುತ್ತವೆ. ಚೀನಾದ ದಕ್ಷಿಣ ಭಾಗದಲ್ಲಿ 2002 ರಲ್ಲಿ ಕಾಣಿಸಿಕೊಂಡ ಸಾರ್ಸ್ ಹಾಗೂ 2012 ರಲ್ಲಿ ಸೌದಿ ಅರೇಬಿಯಾದಲ್ಲಿ ಕಾಣಿಸಿಕೊಂಡ ಮೆರ್ಸ್ ಗೆ ಕೂಡ ಕೊರೊನಾ ವೈರಾಣುವೇ ಕಾರಣವಾದದ್ದು. ಆ ವೈರಾಣುಗಳನ್ನು ಕ್ರಮಬದ್ಧವಾಗಿ ಸಾರ್ಸ್ ಕೊರೊನಾ ವೈರಾಣು ಹಾಗೂ ಮೆರ್ಸ್ ವೈರಾಣು ಎಂದು ಹೆಸರಿಸಿದ್ದರು. ಕಲುಷಿತ ಒಂಟೆಯ ಹಾಲು ಅಥವಾ ಒಂಟೆಯ ಮಾಂಸದ ಬಳಕೆಯಿಂದ ಉಂಟಾದ ಈ ಮೆರ್ಸ್‌ಗೆ ಕ್ಯಾಮೆಲ್ ಫ್ಲೂ ಎಂದೂ ಕರೆದಿದ್ದರು.

ಹೀಗೆ ಈ ವೈರಾಣುವಿನ ವಂಶ ವಾಹಿಯಲ್ಲಿ ಒಂದಿಷ್ಟು ಬದಲಾದಾಗ (ಮ್ಯುಟೇಶನ್) ಈ ವೈರಾಣು ಒಂದು ಹೊಸ ಸ್ವರೂಪವನ್ನು ಪಡೆದು ವಿಶ್ವದಾದ್ಯಂತ ಭೀಕರ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡುತ್ತಲೇ ಬಂದಿದೆ. ಇದೀಗ ಚೀನಾ ದೇಶದ ವುಹಾನ್‌ನ ವೈರಾಣುವಿಗೆ ಎನ್ ಕೊರೊನಾ (ನೋವಲ್ ಕೊರೊನಾ) ವೈರಾಣು ಎಂದು ಕರೆದಿದ್ದಾರೆ.



### ಗುಣಲಕ್ಷಣಗಳೇನು..?

ತೀವ್ರತರವಾದ ಜ್ವರ, ನೆಗಡಿ, ಕೆಮ್ಮು, ಉಸಿರಾಟದ ತೊಂದರೆ, ಎದೆಯ ಭಾಗದಲ್ಲಿ ನೋವು ಮೊದಲಾದುವು. ಕೆಲವು ಸಂದರ್ಭದಲ್ಲಿ ವಾಂತಿ, ಭೇಧಿಯೂ ಕಾಣಿಸಿಕೊಳ್ಳಬಹುದು.

ಸಂಭವನೀಯ ಅಪಾಯಗಳಾದ ಶ್ವಾಸಕೋಶದ ಸೋಂಕು, ಶ್ವಾಸಕೋಶಗಳ ವೈಫಲ್ಯ, ಮೂತ್ರಪಿಂಡಗಳ ವೈಫಲ್ಯ ಮೊದಲಾದುವುಗಳಿಂದ ವ್ಯಕ್ತಿ ಸಾವಿಗೀಡಾಗುತ್ತಾನೆ.

### ರೋಗ ಹರಡುವುದು ಹೇಗೆ?

ರೋಗಿಯು ಕೆಮ್ಮಿದಾಗ ಹಾಗೂ ಸೀನಿದಾಗ ವೈರಾಣುವನ್ನು ಹೊರಗೆಡುವುದರಿಂದ ರೋಗಿಯ ನಿಕಟವರ್ತಿಗಳಿಗೆ ರೋಗ ಹರಡುವ ಸಾಧ್ಯತೆ ಹೆಚ್ಚು.

ವೈಯಕ್ತಿಕ ಸ್ವಚ್ಛತೆಯಿಲ್ಲದೆ ಮೂಗು ಮತ್ತು ಬಾಯಿಯನ್ನು ಹೇಗೆಂದರೆ ಹಾಗೆ ಮುಟ್ಟುವುದರಿಂದಲೂ ರೋಗ ಹರಡಬಹುದು.

ರೋಗಿಯು ಉಪಯೋಗಿಸಿದ ವಸ್ತುಗಳ ಸಂಪರ್ಕಕ್ಕೆ ಬರುವುದರಿಂದ.

ಕೊರೊನಾ ಸೋಂಕಿನಿಂದ ಬಳಲಿದ ಪ್ರಾಣಿಗಳ ಮಾಂಸವನ್ನು ಬಳಸುವುದರಿಂದ.

ಕೊರೊನಾ ಸೋಂಕಿನಿಂದ ಬಳಲುವ ಪ್ರಾಣಿಗಳ ಹಾಲನ್ನು ಬಳಸುವುದರಿಂದ.

### ಚಿಕಿತ್ಸೆ ಏನು?

ಕೊರೊನಾ ವೈರಾಣುವಿನ ಸೋಂಕಿಗೆ ನಿರ್ದಿಷ್ಟವಾದ ಚಿಕಿತ್ಸೆ ಇಲ್ಲ. ಹಾಗಾಗಿ ರೋಗಿಯ ಗುಣಲಕ್ಷಣಗಳನ್ನು ಆಧರಿಸಿ ಆತನಿಗೆ ಚಿಕಿತ್ಸೆಯನ್ನು ನೀಡಬೇಕಾಗುತ್ತದೆ. ಸೋಂಕು ಶಂಕಿತ ವ್ಯಕ್ತಿಗೆ ವಿಶ್ರಾಂತಿ ಕೊಟ್ಟು ಆತನನ್ನು ಮತ್ತು ರೋಗಿಯನ್ನು ಕನಿಷ್ಠ ಹದಿನಾಲ್ಕು ದಿನಗಳವರೆಗೆ ಪ್ರತ್ಯೇಕವಾದ ಕೊಠಡಿಯಲ್ಲಿ ಇರಿಸಬೇಕಾಗುತ್ತದೆ.

ಆತನಿಗೆ ಉಸಿರಾಟಕ್ಕೆ ಬೆಂಬಲ ಕೊಟ್ಟು ಅವಶ್ಯಕತೆಯದ್ದಲ್ಲಿ ಕೃತಕ ಉಸಿರಾಟದ ವ್ಯವಸ್ಥೆಯನ್ನೂ ಮಾಡಬೇಕಾಗುತ್ತದೆ. ಇತರ ಸೂಕ್ಷ್ಮಾಣುಗಳಿಂದ ಸೋಂಕಾಗದಂತೆ ಆ್ಯಂಟಿಬಯಾಟಿಕ್ ಔಷಧಗಳನ್ನು ಕೊಡಬೇಕಾಗಬಹುದು. ಹೆಚ್ಚು ದ್ರವಾಹಾರ, ಪೌಷ್ಟಿಕಾಂಶಗಳುಳ್ಳ ಆಹಾರ ಸೇವನೆಗೆ ಹಾಗೂ ವೈಯಕ್ತಿಕ ಸ್ವಚ್ಛತೆಗೂ ಆದ್ಯತೆಯನ್ನು ಕೊಡಬೇಕಾಗುತ್ತದೆ. ಆತನ ಬಳಿ ಹೋಗುವವರೆಲ್ಲರೂ ಮುಖಕವಚವನ್ನು ಕಡ್ಡಾಯವಾಗಿ ಧರಿಸಬೇಕಾಗುತ್ತದೆ.

### ಮುನ್ನೆಚ್ಚರಿಕೆಗಳೇನು?

- ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು.
- ಕೈಗಳನ್ನು ಆಗಾಗ ಸ್ವಚ್ಛವಾಗಿ ತೊಳೆದುಕೊಳ್ಳುವುದು.
- ಕೆಮ್ಮುವಾಗ ಮತ್ತು ಸೀನುವಾಗ ಬಾಯಿಗೆ ಕರವಸ್ತ್ರ ಅಡ್ಡ ಹಿಡಿಯುವುದು.
- ಸೋಂಕು ಶಂಕಿತ ವ್ಯಕ್ತಿಯ ಬಳಿ ಅಥವಾ ರೋಗಿಯ ಬಳಿ ತೆರಳುವಾಗ ಕಡ್ಡಾಯವಾಗಿ ಮೂರು ಪದರಗಳುಳ್ಳ ಮುಖ ಕವಚವನ್ನು ಧರಿಸುವುದು. ರೋಗಿಯು ಬಳಸಿದ ವಸ್ತುಗಳನ್ನು ಬಳಸದಿರುವುದು.
- ಪ್ರಾಣಿಗಳ ನೇರ ಸಂಪರ್ಕವನ್ನು ಹಾಗೂ ಬೇಯಿಸದ ಅಥವಾ ಕಚ್ಚಾ ಮಾಂಸದ ಸೇವನೆಯನ್ನು ಮಾಡದಿರುವುದು.
- ವಿಮಾನ ನಿಲ್ದಾಣಗಳಲ್ಲಿ ವ್ಯಕ್ತಿಯ ಶರೀರದ ತಾಪಮಾನವನ್ನು ಅಳೆಯುವ ಥರ್ಮಲ್ ಸ್ಕ್ರೀನಿಂಗ್ ಬಳಸಿ ಏರಿದ ತಾಪಮಾನದಿಂದ ಬಳಲುವವರನ್ನು ಪ್ರತ್ಯೇಕಿಸಿ ಕಣ್ಗಾವಲಿಡುವುದು.
- ಕೊರೊನಾ ವೈರಾಣು ಕಾಣಿಸಿಕೊಂಡಂತಹ ದೇಶಗಳೆಡೆಗೆ ಪ್ರಯಾಣ ಬೆಳೆಸದಿರುವುದು.

### ವೈರಾಣುವಿನ ಪತ್ತೆ ಹೇಗೆ..?

ಗುಣಲಕ್ಷಣಗಳು ಕಂಡುಬಂದ ವ್ಯಕ್ತಿಯ ಮೂಗು, ಗಂಟಲಿನ ಸ್ರಾವದ ಲೇಪನ ಮತ್ತು ರಕ್ತದ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಬೇಕು. ರಾಷ್ಟ್ರೀಯ ವೈರಾಣುಗಳ ಸಂಸ್ಥೆಯಲ್ಲಿ ಈ ವೈರಾಣುವನ್ನು ಪತ್ತೆ ಮಾಡುವ ಸೌಲಭ್ಯಗಳಿರುತ್ತವೆ. ಅಲ್ಲಿ ವಿವಿಧ ಪರೀಕ್ಷೆಗಳಿಗೆ ಒಳಪಡಿಸಿ ವೈರಾಣುವನ್ನು ಪತ್ತೆ ಮಾಡಲಾಗುತ್ತದೆ.

(ಲೇಖಕಿ ಶಿವಮೊಗ್ಗದಲ್ಲಿ ವೈದ್ಯೆ.
ಸಂಪರ್ಕ: 9844083284)